**ಕರ್ನಾಟಕ ಸರ್ಕಾರ**

**ಜಿಲ್ಲಾ ಪಂಚಾಯತ ಕಾರ್ಯಾಲಯ, ಬೆಳಗಾವಿ.**

ಕ್ರ ಸಂ:ಜಿಪಂಬೆ/ಲೆಶಾ/ಹೊರಗುತ್ತಿಗೆ/ಗಯನಿ/14-15 ದಿನಾಂಕ:06/06/2014

# ಸುತ್ತೋಲೆ

ವಿಷಯ: ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲವನ್ನು ಪಡೆಯುವ ಕುರಿತು.

ಉಲ್ಲೇಖ: ದಿನಾಂಕ:5/6/14ರಂದು ಜಿಲ್ಲಾ ಪಂಚಾಯತನಲ್ಲಿ ನಡೆದ ಸಭೆಯಲ್ಲಿ ಚರ್ಚಿಸಿದಂತೆ.

****

ಜಿಲ್ಲಾ ಪಂಚಾಯತ ವ್ಯಾಪ್ತಿಯ ವಿವಿಧ ಇಲಾಖೆಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಲೆಕ್ಕ ಸಹಾಯಕರು, ಕಂಪ್ಯೂಟರ ಆಪರೇಟರ, ವಾಹನಚಾಲಕ, ಗ್ರೂಪ್-ಡಿ ಇತ್ಯಾದಿ ಹುದ್ದೆಗಳಿಗೆ ಮಾನವ ಸಂಪನ್ಮೂಲದಡಿ ಸೇವೆಯನ್ನು ಪಡೆಯಲಾಗುತ್ತಿದೆ. ಸದರಿ ಹೊರಗುತ್ತಿಗೆಯನ್ನು ಪಡೆದಾಗ ಹೊರಗುತ್ತಿಗೆಯಡಿ ನೇಮಿಸಲಾದ ಸಿಬ್ಬಂದಿಗಳಿಗೆ ವೇತನವನ್ನು ಕಾರ್ಮಿಕ ಇಲಾಖೆಯ ಕನಿಷ್ಠ ವೇತನ ಕಾಯ್ದೆಯಡಿ ಸಂದಾಯವಾಗುವಂತೆ ಹಾಗೂ ಸದರಿಯವರ ವೇತನದಿಂದ ಕಟಾಯಿಸಲಾಗುವ ಹಾಗೂ ಎಂಪ್ಲಾಯರ ಕಾಂಟ್ರಿಬ್ಯೂಷನ್‌ನಿಂದ ಪಡೆಯುವ ಕಾರ್ಮಿಕ ಭವಿಷ್ಯನಿಧಿ ಮೊತ್ತವನ್ನು ನೌಕರರ ಕಾರ್ಮಿಕ ಭವಿಷ್ಯನಿಧಿ ಖಾತೆಗೆ ಸಂದಾಯಮಾಡಿದ ಕುರಿತು, ಕಾರ್ಮಿಕ ರಾಜ್ಯ ವಿಮಾ ಯೋಜನೆಯಡಿ ವಿಮಾ ಮೊತ್ತವನ್ನು ಕಟಾಯಿಸಿ ವಿಮೆ ಇಲಾಖೆಗೆ ಜಮೆ ಮಾಡಿದ ಬಗ್ಗೆ ನಿಗಾವಹಿಸುವುದು ಅತೀ ಅವಶ್ಯವಾಗಿದೆ. ಹೊರಗುತ್ತಿಗೆಯಡಿ ನೇಮಕಾತಿಯಾಗಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಂದ ಹಾಗೂ ವಿವಿಧ ಕಾರ್ಮಿಕ ಸಂಘಟನೆಗಳಿಂದ ಕಾರ್ಮಿಕ ಇಲಾಖೆಯು ನಿಗದಿಸಿದ ಕನಿಷ್ಠ ಮೊತ್ತಕ್ಕಿಂತಲೂ ಕಡಿಮೆ ಮೊತ್ತವನ್ನು ಸಿಬ್ಬಂದಿಗಳಿಗೆ ಸಂದಾಯಮಾಡುತ್ತಿರುವ ಕುರಿತು ಹಾಗೂ ಭವಿಷ್ಯನಿಧಿ ಹಾಗೂ ಕಾರ್ಮಿಕ ರಾಜ್ಯ ವಿಮಾ ಮೊತ್ತವನ್ನು ಕಟಾಯಿಸುತ್ತಿದ್ದು, ಅದನ್ನು ಹೊರಗುತ್ತಿಗೆ ನೌಕರರ ಖಾತೆಗಳಿಗೆ ಸಂದಾಯ ಮಾಡದೇ ಇರುವ ಕುರಿತು ಅನೇಕ ದೂರುಗಳು ಬಂದಿರುವ ಹಿನ್ನೆಲೆಯಲ್ಲಿ ದಿನಾಂಕ:05/06/2014ರಂದು ಜಿಲ್ಲಾ ಪಂಚಾಯತ ಸಭಾಂಗಣದ ಸಭೆಯಲ್ಲಿ ಚರ್ಚಿಸಿದಂತೆ ಈ ಕೆಳಗಿನಂತೆ ಕ್ರಮಗಳನ್ನು ಜರುಗಿಸಲು ಈ ಮೂಲಕ ಸೂಚಿಸಲಾಗಿದೆ.

1. ಪ್ರತಿ ತಿಂಗಳು ಬಿಲ್ಲನ್ನು ಸಂದಾಯಮಾಡುವಾಗ ಕಾರ್ಮಿಕ ಇಲಾಖೆಯು ಕನಿಷ್ಠ ವೇತನ ಕಾಯ್ದೆಯಡಿ ನಿಗದಿಪಡಿಸಿರುವ ದರಗಳಂತೆ ವೇತನವನ್ನು ಸಂಬಂಧಿಸಿದ ಸಿಬ್ಬಂದಿಗಳ ಬ್ಯಾಂಕ್ ಖಾತೆಗಳಿಗೆ ನೇರವಾಗಿ ವರ್ಗಾವಣೆ ಮೂಲಕ ಹಿಂದಿನ ತಿಂಗಳಲ್ಲಿ ಜಮೆ ಮಾಡಿದ ಬಗ್ಗೆ ವಿವರಗಳನ್ನು ಲಗತ್ತಿಸುವಂತೆ ಗುತ್ತಿಗೆದಾರರಿಗೆ ಸೂಚಿಸುವುದು.
2. ಪ್ರತಿ ತಿಂಗಳು ಬಿಲ್ಲನ್ನು ಸಂದಾಯಮಾಡುವಾಗ ರೂ:6,000/-ಕ್ಕಿಂತ ಕಡಿಮೆ ಕನಿಷ್ಠ ವೇತನ ಪಡೆಯುತ್ತಿರುವ ಸಿಬ್ಬಂದಿಗಳ ವೇತನದಿಂದ ಇ.ಪಿ.ಎಫ್. ಕಟಾಯಿಸಿದ ಹಾಗೂ ಎಂಪ್ಲಾಯರ ಕಾಂಟ್ರಿಬ್ಯೂಷನ್‌ನಿಂದ ಪಡೆಯಲಾಗುವ ಕಾರ್ಮಿಕ ಭವಿಷ್ಯನಿಧಿಯ ಮೊತ್ತವನ್ನು ಹೊರಗುತ್ತಿಗೆ ಸಿಬ್ಬಂದಿಗಳ ಭವಿಷ್ಯನಿಧಿ ಖಾತೆಗಳಿಗೆ ಜಮೆ ಮಾಡಿದ ಬಗ್ಗೆ ಹಿಂದಿನ ತಿಂಗಳ (ಜಮೆಯಾಗಿರುವ ಚಲನ್ ಪ್ರತಿ ಮತ್ತು ಸಿಬ್ಬಂದಿ ಪಟ್ಟಿ, ಖಾತೆ ಸಂಖ್ಯೆ ಸಹಿತ) ವಿವರಗಳನ್ನು ಲಗತ್ತಿಸುವಂತೆ ಸಂಬಂಧಿಸಿದ ಗುತ್ತಿಗೆದಾರರಿಗೆ ಸೂಚಿಸುವುದು.
3. ಪ್ರತಿ ತಿಂಗಳು ಬಿಲ್ಲನ್ನು ಸಂದಾಯಮಾಡುವಾಗ ರೂ:10,000/-ಕ್ಕಿಂತ ಕಡಿಮೆ ಕನಿಷ್ಠ ವೇತನ ಪಡೆಯುತ್ತಿರುವ ಸಿಬ್ಬಂದಿಗಳ ವೇತನದಿಂದ ಕಟಾಯಿಸಿದ ಹಾಗೂ ಎಂಪ್ಲಾಯರ ಕಾಂಟ್ರಿಬ್ಯೂಷನ್‌ನಿಂದ ಪಡೆಯಲಾಗುವ ಕಾರ್ಮಿಕ ವಿಮಾ ಮೊತ್ತವನ್ನು ಹೊರಗುತ್ತಿಗೆ ಸಿಬ್ಬಂದಿಗಳ ಕಾರ್ಮಿಕ ವಿಮಾ ಖಾತೆಗಳಿಗೆ ಜಮೆ ಮಾಡಿದ ಬಗ್ಗೆ (ಚಲನ್ ಪ್ರತಿ ಮತ್ತು ಸಿಬ್ಬಂದಿ ಪಟ್ಟಿ) ಹಿಂದಿನ ತಿಂಗಳ ವಿವರಗಳನ್ನು ಲಗತ್ತಿಸುವಂತೆ ಸಂಬಂಧಿಸಿದ ಗುತ್ತಿಗೆದಾರರಿಗೆ ಸೂಚಿಸುವುದು
4. ಪ್ರತಿ ತಿಂಗಳು ಬಿಲ್ಲನ್ನು ಸಂದಾಯಮಾಡುವಾಗ ರೂ:10,000/-ಕ್ಕಿಂತ ಮೇಲ್ಪಟ್ಟು ವೇತನ ಪಡೆಯುತ್ತಿರುವ ಸಿಬ್ಬಂದಿಗಳ ವೇತನದಿಂದ ಕಟಾಯಿಸಿದ ವೃತ್ತಿ ತೆರಿಗೆ ಜಮೆ ಮಾಡಿದ ಬಗ್ಗೆ ಹಿಂದಿನ ತಿಂಗಳ ವಿವರಗಳನ್ನು ಲಗತ್ತಿಸುವಂತೆ ಸಂಬಂಧಿಸಿದ ಗುತ್ತಿಗೆದಾರರಿಗೆ ಸೂಚಿಸುವುದು
5. ಗುತ್ತಿಗೆದಾರರು ಹೊರಗುತ್ತಿಗೆ ಸೇವೆ ನೀಡಿದ್ದಕ್ಕೆ ಪಡೆದ ಸೇವಾ ತೆರಿಗೆಯನ್ನು ಸಂಬಂಧಿಸಿದ ಇಲಾಖೆಗೆ ಸಂದಾಯಮಾಡಿದ ಕುರಿತು ಪ್ರತಿ ತಿಂಗಳಿಗೊಮ್ಮೆ ಚಲನ್ ಪ್ರತಿಯನ್ನು ಮತ್ತು ಪ್ರತಿ ಮೂರು ತಿಂಗಳಿಗೊಮ್ಮೆ ರಿಟರ್ನ್ ಫೈಲ ಮಾಡಿರುವ ಕುರಿತು ಸದರಿ ಹೊರಗುತ್ತಿಗೆಯಿಂದ ಪಡೆದ ಮೊತ್ತಕ್ಕೆ ತಾಳೆಯಾಗುವಂತೆ ಸಲ್ಲಿಸುವಂತೆ ಸೂಚಿಸುವುದು.
6. ಗುತ್ತಿಗೆದಾರರು ಏಕವ್ಯಕ್ತಿ ಸಂಸ್ಥೆಯಾಗಿದ್ದರೆ ಅವರ ಬಿಲ್ಲಿನ ಮೊತ್ತದಿಂದ ಪ್ರತಿಶತ 1ರಷ್ಟು ಹಾಗೂ ಪಾಲುದಾರಿಕೆ ಸಂಸ್ಥೆ, ಇತ್ಯಾದಿ ಇದ್ದರೆ ಪ್ರತಿಶತ 2ರಷ್ಟು ಆದಾಯ ತೆರಿಗೆಯನ್ನು ಬಿಲ್ಲಿನಲ್ಲಿ ಕಡ್ಡಾಯವಾಗಿ ಕಟಾಯಿಸಿ ಸಂದಾಯ ಮಾಡುವುದು.
7. ಕೆಲವೊಂದು ಹೊರಗುತ್ತಿಗೆಗಳಲ್ಲಿ ಸೇವಾಶುಲ್ಕವನ್ನು ಮಾತ್ರ ಪ್ರತಿಶತದಲ್ಲಿ ನಮೂದಿಸುತ್ತಿದ್ದು, ಕನಿಷ್ಠ ಕಾರ್ಮಿಕ ದರಗಳಂತೆ ದರಗಳನ್ನು ಭವಿಷ್ಯನಿಧಿ, ಕಾರ್ಮಿಕ ವಿಮಾನಿಧಿ ಸೇವಾ ತೆರಿಗೆಗಳನ್ನು ಒಟ್ಟಾಗಿ ನಮೂದಿಸುತ್ತಿದ್ದು ಅವನ್ನು ಪ್ರತ್ಯೇಕವಾಗಿ ನಮೂದಿಸುವಂತೆ ಸೂಚಿಸುವುದು.

ಈ ಮೇಲಿನ ವಿವರಗಳನ್ನು ಸಲ್ಲಿಸುವಾಗ ಪ್ರತಿ ಸಂದಾಯದ/ಕಟಾವಣೆಯ ವಿವರಗಳ ಪಟ್ಟಿಯಲ್ಲಿ "ಸದರಿ ಮೇಲೆ ಸಲ್ಲಿಸಿದ ಮಾಹಿತಿಯು ನಿಜವಾಗಿದ್ದು, ಒಂದು ವೇಳೆ ಸುಳ್ಳು ಎಂದು ಕಂಡುಬಂದಲ್ಲಿ ಕಾರ್ಮಿಕ ಇಲಾಖೆ/ಕಾರ್ಮಿಕ ಭವಿಷ್ಯನಿಧಿ/ಕಾರ್ಮಿಕ ರಾಜ್ಯ ವಿಮಾ ಯೋಜನೆ/ಸೇವಾ ತೆರಿಗೆ ನಿಯಮಾವಳಿಯ ನಿಯಮಗಳಡಿ ತೆಗೆದುಕೊಳ್ಳುವ ಕ್ರಮಕ್ಕೆ ಬದ್ಧನಿರುತ್ತೇನೆ ಎಂದು ಪ್ರಮಾಣೀಕರಿಸುತ್ತೇನೆ" ಎಂದು ಪ್ರಮಾಣಪತ್ರವನ್ನು ನಮೂದಿಸಿ ಸಲ್ಲಿಸುವಂತೆ ಸೂಚಿಸುವುದು.

ಹೊರಗುತ್ತಿಗೆ ಬಿಲ್ಲಿನ ಮೊತ್ತವನ್ನು ಸಂದಾಯಮಾಡುವ ಮುಂಚೆ ಈ ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಿ ಬಿಲ್ಲುಗಳನ್ನು ಸಂದಾಯ ಮಾಡಲು ಕ್ರಮ ಜರುಗಿಸುವಂತೆ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.

ಗುತ್ತಿಗೆದಾರರು ಸಂದಾಯಕ್ಕಾಗಿ ಬಿಲ್ಲುಗಳನ್ನು ಸಲ್ಲಿಸುವಾಗ ಈ ಕೆಳಗಿನಂತೆ ವಿವರಗಳನ್ನು ನಮೂದಿಸಿ ಸಲ್ಲಿಸುವಂತೆ ಸೂಚಿಸುವುದು.

_______ಹುದ್ದೆಯ ಸೇವೆಯನ್ನು ಹೊರಗುತ್ತಿಗೆಯ ಮೂಲಕ ಪೂರೈಸಿದ್ದಕ್ಕಾಗಿ ಸಂದಾಯಮಾಡಬೇಕಾದ ಮೊತ್ತದ ವಿವರಗಳು.

ಒಟ್ಟು ಒದಗಿಸಿದ ಸಿಬ್ಬಂದಿಗಳ ಸಂಖ್ಯೆ:__________

ತಿಂಗಳು :__________

| 1. | ವೇತನ, ಭತ್ಯೆ ಹಾಗೂ ಇಪಿಎಫ್, ಇಎಸ್ಐ ಕಟಾವಣೆಗಳ ವಿವರಗಳು | ನಮೂದಿಸಿದ ಮಾಸಿಕ ದರ ರೂ: | ಒಟ್ಟು ಮೊತ್ತ (ರೂ) |
|---|---|---|---|
| | <u>1. ಕಾರ್ಮಿಕ ಇಲಾಖೆ ನಿಗದಿಪಡಿಸಿರುವ ಪ್ರಕಾರ ಒಬ್ಬ ಕಾರ್ಮಿಕರಿಗೆ ಕನಿಷ್ಠ ವೇತನ ಕಾಯ್ದೆಅಡಿ ಸಂದಾಯ ಮಾಡುವ ವೇತನ ಹಾಗೂ ಇತರೆ ಭತ್ಯೆಗಳು</u><br><u>ಮೇಲಿನ ಮೊತ್ತದಿಂದ ಮಾಡಬೇಕಾದ ಕಟಾವಣೆಗಳು:</u><br>ಎ. ಭವಿಷ್ಯನಿಧಿ ಮೊತ್ತ:<br>(ವೇತನ ಹಾಗೂ ಇತರೆ ಭತ್ಯೆಗಳ ಪ್ರತಿಶತ 12%)<br>ಬಿ. ಕಾರ್ಮಿಕ ರಾಜ್ಯ ವಿಮಾ ನಿಧಿ ಮೊತ್ತ .:<br>(ವೇತನ ಹಾಗೂ ಇತರೆ ಭತ್ಯೆಗಳ ಪ್ರತಿಶತ 1.75%)<br>ಸಿ. ವೃತ್ತಿ ತೆರಿಗೆ ಮೊತ್ತ:<br>ಒಬ್ಬ ಕಾರ್ಮಿಕನಿಗೆ ಸಂದಾಯ ಮಾಡಬೇಕಾದ ನಿವ್ವಳ ಮೊತ್ತ (ಸಿಬ್ಬಂದಿಗಳ ಬ್ಯಾಂಕ ಖಾತೆಗೆ ಜಮೆ ಮಾಡುವುದು)<br><u>2. ಎಂಪ್ಲಾಯರ ಕಾಂಟ್ರಿಬ್ಯೂಷನ್:</u><br>ಎ. ಭವಿಷ್ಯನಿಧಿ ಮೊತ್ತ:<br>(ವೇತನ ಹಾಗೂ ಇತರೆ ಭತ್ಯೆಗಳ ಪ್ರತಿಶತ 13.61%)<br>ಬಿ. ಕಾರ್ಮಿಕ ರಾಜ್ಯ ವಿಮಾ ನಿಧಿ ಮೊತ್ತ .:<br>(ವೇತನ ಹಾಗೂ ಇತರೆ ಭತ್ಯೆಗಳ ಪ್ರತಿಶತ 4.15%)<br>3. ಗುತ್ತಿಗೆದಾರರು ಒಬ್ಬ ಕಾರ್ಮಿಕನಿಗೆ ಪಡೆಯುವ ಸೇವಾಶುಲ್ಕ<br>4. ಸೇವಾತೆರಿಗೆ (ಪ್ರತಿಶತ 12.36) | | |
| | ಒಟ್ಟು ಸಂದಾಯಮಾಡಬೇಕಾದ ಮೊತ್ತ (1+2ಎ,ಬಿ+3+4) | | |

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ, ಬೆಳಗಾವಿ.

ಗೆ,

1) ಜಿಲ್ಲಾ ಅಧಿಕಾರಿಗಳು ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಬೆಳಗಾವಿ.
2) ಉಪ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಬೆಳಗಾವಿ.
3) ಉಪ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಚಿಕ್ಕೋಡಿ.
4) ಕಾರ್ಯನಿರ್ವಾಹಕ ಅಭಿಯಂತರರು ಪಂ.ರಾ.ಇಂ.ವಿಭಾಗ ಬೆಳಗಾವಿ.
5) ಕಾರ್ಯನಿರ್ವಾಹಕ ಅಭಿಯಂತರರು ಪಂ.ರಾ.ಇಂ.ವಿಭಾಗ ಚಿಕ್ಕೋಡಿ.
6) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಬೆಳಗಾವಿ
7) ಅಪರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಚಿಕ್ಕೋಡಿ.
8) ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು ಬೆಳಗಾವಿ.

9) ಜಂಟಿ ನಿರ್ದೇಶಕರು, ಕೃಷಿ ಇಲಾಖೆ ಬೆಳಗಾವಿ.
10) ಉಪ ನಿರ್ದೇಶಕರು, ಪಶುಸಂಗೋಪನಾ ಇಲಾಖೆ ಬೆಳಗಾವಿ.
11) ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳು, ಬೆಳಗಾವಿ.
12) ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳು, ಚಿಕ್ಕೋಡಿ.
13) ಹಿರಿಯ ಸಹ ನಿರ್ದೇಶಕರು ಮೀನುಗಾರಿಕೆ ಇಲಾಖೆ ಬೆಳಗಾವಿ.
14) ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಳಗಾವಿ.
15) ಉಪ ನಿರ್ದೇಶಕರು ರೇಷ್ಮೆ ಇಲಾಖೆ ಬೆಳಗಾವಿ.
16) ಉಪ ನಿರ್ದೇಶಕರು ತೋಟಗಾರಿಕೆ ಇಲಾಖೆ ಬೆಳಗಾವಿ.
17) ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು ಬೆಳಗಾವಿ.
18) ಉಪ ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿಗಳು ಬೆಳಗಾವಿ.
19) ಜಿಲ್ಲಾ ಯುವಜನ ಸೇವಾ ಮತ್ತು ಕ್ರೀಡಾ ಅಧಿಕಾರಿಗಳು ಬೆಳಗಾವಿ.
20) ಉಪ ನಿರ್ದೇಶಕರು ಕೈಗಾರಿಕಾ ಮತ್ತು ವಾಣಿಜ್ಯ (ಖಾ.ಗ್ರಾ) ಕೇಂದ್ರ ಬೆಳಗಾವಿ.
21) ಹಿರಿಯ ಭೂ ವಿಜ್ಞಾನಿಗಳು, ಬೆಳಗಾವಿ.
22) ಉಪ ನಿರ್ದೇಶಕರು ಕೈಮಗ್ಗು ಮತ್ತು ಜವಳಿ ಇಲಾಖೆ ಬೆಳಗಾವಿ.
23) ಉಪ ನಿರ್ದೇಶಕರು ಆಯುಷ್ ಇಲಾಖೆ ಬೆಳಗಾವಿ.
24) ಶಿಕ್ಷಣಾಧಿಕಾರಿಗಳು ಅಕ್ಷರ ದಾಸೋಹ ಬೆಳಗಾವಿ.
25) ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕಾ ಪಂಚಾಯತ ಬೆಳಗಾವಿ, ಬೈಲಹೊಂಗಲ್, ಅಥಣಿ, ಚಿಕ್ಕೋಡಿ, ರಾಮದುರ್ಗ, ಗೋಕಾಕ, ಹುಕ್ಕೇರಿ, ಸವದತ್ತಿ, ರಾಯಬಾಗ, ಖಾನಾಪೂರ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ, ಬೆಳಗಾವಿ.